# ಬೃಹಚ್ಚರಣ


**ಸಂಪಾದಕ ಸಮಿತಿ**

| | |
|---|---|
| ಎಸ್. ಸೋಮಸುಂದರ | ಪ್ರಧಾನ ಸಂಪಾದಕ |
| ವಿ. ಎಸ್. ಮಣಿ | ಕಾರ್ಯದರ್ಶಿ |
| ಕೆ.ಸಿ. ನಟರಾಜನ್ | ಸಂಚಾಲಕರು |
| ಅಚಲ ರಮೇಶ್ | ಸದಸ್ಯರು |
| ವೈ.ಜಿ. ಗಿರಿಶಾಸ್ತ್ರಿ | ಸದಸ್ಯರು |
| ಕೆ.ಎಸ್. ಮಧುಸೂದನ | ಗೌ॥ ಸಂಪಾದಕ |



ಸಂಪುಟ : 2 ಸಂಚಿಕೆ : 4 ತ್ರೈಮಾಸಿಕ ವಾರ್ತಾಪತ್ರ ಖಾಸಗಿ ಪ್ರಸಾರಕ್ಕಾಗಿ ಅಕ್ಟೋಬರ್–ಡಿಸೆಂಬರ್ 2012




ಅರ್ಪಣೆ

ಬೃಹಚ್ಚರಣ

ಈ ಸಂಚಿಕೆಯನ್ನು ಬೃಹಚ್ಚರಣ ಸಂಘದ ಅಧ್ಯಕ್ಷರಾಗಿದ್ದ **ಶ್ರೀ ಟಿ. ಪಟ್ಟಾಭಿರಾಮಯ್ಯ** ಅವರಿಗೆ ಶ್ರದ್ಧೆ ಹಾಗೂ ಗೌರವಗಳಿಂದ ಅರ್ಪಿಸಿದೆ.

## ಅಧ್ಯಕ್ಷರ ನುಡಿ

*ಆತ್ಮೀಯ ಸಜ್ಜನ ಬಂಧುಗಳೇ,*

ಹೊಸ ವರ್ಷ 2013 ಹಾಗೂ ಸಂಕ್ರಾಂತಿಯ ಶುಭಾಶಯಗಳು. ಈ ಶುಭ ಸಂದರ್ಭದಲ್ಲಿ ಪರಮಾತ್ಮನು, ಸಮುದಾಯದ ಸದಸ್ಯರಿಗೆ ಹಾಗೂ ಕುಟುಂಬದವರಿಗೆ ಆರೋಗ್ಯ, ನೆಮ್ಮದಿ, ನೀಡಲೆಂದು ಕಾರ್ಯಕಾರಿ ಸಮಿತಿಯು ದೇವರಲ್ಲಿ ಪ್ರಾರ್ಥಿಸುತ್ತದೆ.

ಪ್ರಕೃತಿ ವಿಕೋಪದ ಕಾರಣದಿಂದ ಮುಂದೂಡಿದ್ದ 'ಬೃಹಚ್ಚರಣ ಸಮಾವೇಶ' ಕಾರ್ಯಕ್ರಮವು ಅತ್ಯಂತ ಅರ್ಥಗರ್ಭಿತವಾಗಿ 30–12–2012ರಂದು ನಡೆದು, ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ ಸದಸ್ಯರ ಕುಟುಂಬಗಳಿಗೆ ವಂದನೆಗಳು.

ಕು. ವಾಣಿಶ್ರೀ ಪ್ರಾರ್ಥನೆಯೊಂದಿಗೆ ಪ್ರಾರಂಭವಾಗಿ, ಶ್ರೀ ಶಶಿಧರ್‌ರವರ ಸ್ವಾಗತ ಭಾಷಣ, ನೆರೆದವರನ್ನು ಸಮಾರಂಭಕ್ಕೆ ಆಹ್ವಾನಿಸಿತು. ಸಂಘದ ಕಾರ್ಯದರ್ಶಿ ಶ್ರೀ ವಿ.ಎಸ್. ಮಣಿಯವರು ತಮ್ಮ ಪ್ರಾಸ್ತಾವಿಕ ನುಡಿಯಲ್ಲಿ 'ಸಂಘದ ಸದಸ್ಯರು ಒಂದೆಡೆ ಸೇರಿ, ಹಿಂದಿನ ನೆನಪುಗಳು, ಮುಂದಿನ ಪೀಳಿಗೆಯ ಬಗ್ಗೆ ಚಿಂತನೆ, ಸ್ನೇಹ, ಪ್ರೀತಿ, ಭಾವನೆಯೊಂದಿಗೆ, ನೋವು, ನಲಿವುಗಳ ಪರಸ್ಪರ ವಿನಿಮಯದ ನೆಲೆಯಾಗಬೇಕೆಂಬ ತಮ್ಮ ಆಶಯವನ್ನು ವ್ಯಕ್ತಪಡಿಸಿದರು.

ಹಿಂದಿನಂತೆಯೇ ಈ ಬಾರಿಯೂ 75 ವಸಂತಗಳನ್ನು ಪೂರೈಸಿರುವ ಹಿರಿಯ ಚೇತನಗಳಿಗೆ 'ಬೃಹಚ್ಚರಣ ಸಮಾವೇಶ' ಕಾರ್ಯಕ್ರಮದಲ್ಲಿ ಗೌರವಿಸಿದೆವು. ಹಿರಿಯ ಸದಸ್ಯ ಪ್ರೊ. ಬಿ.ಎಸ್. ಸೂರ್ಯನಾರಾಯಣ ಹಾಗೂ ಪ್ರೊ. ನಾಗರತ್ನರವರು ಸನ್ಮಾನಿತರ ಪರವಾಗಿ ಸಂಘದ ಕಾರ್ಯಕಾರಿ ಸಮಿತಿಗೆ ವಂದನೆ ಅರ್ಪಿಸಿ, ಸಂಘದ ಕಾರ್ಯ ಚಟುವಟಿಕೆಗಳನ್ನು ಶ್ಲಾಘಿಸಿದರು.

ಸಮಾರಂಭದಲ್ಲಿ ಸದಸ್ಯೆ, ಸಂಗೀತ ವಿದುಷಿ ಶ್ರೀಮತಿ ಸರಸ್ವತಿ ನಟರಾಜನ್‌ರವರ ವೀಣಾವಾದನ ಹಾಗೂ ಯುವ ಪ್ರತಿಭೆಗಳ ಕಲಾ ಪ್ರದರ್ಶನಕ್ಕೆ ಅವಕಾಶ ಮಾಡಿಕೊಡಲಾಗಿತ್ತು. ಇದು ನೆರೆದ ಸಭಿಕರ ಮೆಚ್ಚುಗೆಗೆ ಪಾತ್ರವಾಯಿತು. ಇದೇ ಸಂದರ್ಭದಲ್ಲಿ ಹಿರಿಯ ಸದಸ್ಯ ಕವಿ, ಸಾಹಿತಿ ಶ್ರೀ ಸತ್ಯಮೂರ್ತಿ ಅವರು ಹಾಗೂ ಶ್ರೀಮತಿ ನಾಗರತ್ನರವರು ಸ್ವರಚಿತ ಕವಿತೆಗಳನ್ನು ವಾಚಿಸಿದರು. ನಮ್ಮನಗಲಿದ ನಮ್ಮವರಿಗೆ ಶ್ರದ್ಧಾಂಜಲಿ ಅರ್ಪಿಸಿ ಒಂದು ನಿಮಿಷದ ಮೌನ ಗೌರವ ಸಮರ್ಪಣೆ ಮನಕಲಕುವಂತಿತ್ತು.

ನಮ್ಮ ಕಾರ್ಯದರ್ಶಿ ಶ್ರೀ ಮಣಿಯವರ ನಿರ್ದೇಶನದಲ್ಲಿ ನಮ್ಮ ರಾಷ್ಟ್ರದ ಮಹಾನ್ ಗ್ರಂಥಗಳಾದ **'ರಾಮಾಯಣ'** ಮತ್ತು **'ಮಹಾಭಾರತ'**ದ ರಸಪ್ರಶ್ನೆ ಕಾರ್ಯಕ್ರಮವು ನಮ್ಮ ಸಮುದಾಯದ ಮಕ್ಕಳಿಗಿದ್ದು, ಅದನ್ನು ಶ್ರೀ ರಮೇಶ್, ಶ್ರೀ ಸತ್ಯಮೂರ್ತಿ, ಶ್ರೀಮತಿ ಗೌರಮ್ಮರವರು ನಡೆಸಿಕೊಟ್ಟದ್ದು, ಅವರುಗಳಿಗೆ ಕೃತಜ್ಞತೆ. ಭಾಗವಹಿಸಿದ ಎಲ್ಲಾ ವಿದ್ಯಾರ್ಥಿಗಳಿಗೂ ಸಂಘದ ಅಭಿನಂದನೆ. ಕಾರ್ಯಕ್ರಮವನ್ನು ನಿರೂಪಿಸಿದ ಕು. ಅಚಲಾ ರಮೇಶ್‌ಗೆ ಮುಂದಿನ ಭವಿಷ್ಯವು ಉಜ್ವಲವಾಗಿರಲೆಂದು ಹಾರೈಕೆ.

**ಕಿತ್ತಗಾನಹಳ್ಳಿಯಲ್ಲಿ ಇದೇ ಮಾರ್ಚ್ 16 ನಾಗಾರಾಧನೆ ಹಾಗೂ ಮಾರ್ಚ್ 17ರ ರಥೋತ್ಸವ ಕಾರ್ಯಕ್ರಮ ಜರುಗಲಿದ್ದು ಸಮುದಾಯದ ಕುಟುಂಬದವರೆಲ್ಲಾ ಭಾಗವಹಿಸಲು ಕೋರಿಕೆ.**

ಸಂಘವು 'ಶಾಶ್ವತ ಅನ್ನ ಸಂತರ್ಪಣಾ ನಿಧಿ' ಪುದುವಟ್ಟನ್ನು ಸ್ಥಾಪಿಸಿದ ದಿನವೇ 26 ದಾನಿಗಳು ಪುದುವಟ್ಟು ನೀಡಿ, ದೈವೀಕ ಕಾರ್ಯಕ್ರಮದಲ್ಲಿ ಪಾಲ್ಗೊಂಡವರಿಗೆ ಸಂಘವು ಚಿರಋಣಿ. ಎಲ್ಲ ಸಹೃದಯ ಬಂಧುಗಳೂ ಈ ದೇವತಾ ಕಾರ್ಯದಲ್ಲಿ ಭಾಗಿಗಳಾಗಲು ಅವಕಾಶವಿದೆ.

'ಬೃಹಚ್ಚರಣ' ಪತ್ರಿಕೆಯ ಬಗ್ಗೆ ತಮ್ಮ ಮೆಚ್ಚುಗೆಯು ನಮಗೆ ಸಂತಸ ನೀಡಿದೆ. ಉತ್ತಮ ವಾರ್ತಾಪತ್ರವಾಗಿ, ಚಿತ್ರಗಳೊಂದಿಗೆ ಇನ್ನೂ ಹೆಚ್ಚಿನ ಜನಪ್ರಿಯವಾಗುವಂತೆ ತರಲಿದ್ದೇವೆ. ಜಾಹಿರಾತು ಕೊಟ್ಟು ಸಹಕಾರ ನೀಡಲು ಕೋರಿಕೆ. ಹಿಂದಿನ ವರ್ಷದಂತೆಯೇ ಈ ಬಾರಿಯೂ ಯುಗಾದಿ ಹಬ್ಬದ ಸಮಯಕ್ಕೆ ತಮಗೆಲ್ಲಾ ಶುಭಾಶಯಗಳೊಂದಿಗೆ 'ದಿನಚರಿ' ಕ್ಯಾಲೆಂಡರನ್ನು ವಿತರಿಸಲಾಗುವುದು.

■ ಎಸ್. ಸೋಮಸುಂದರ

## ಸಂಪಾದಕೀಯ

ಈ ಸಂಚಿಕೆ ತಡವಾದದ್ದಕ್ಕೆ ಕ್ಷಮೆ ಇರಲಿ. ಸಂಪಾದಕ ಮಂಡಲಿಗೆ ಈ ಸಂಚಿಕೆಯಿಂದ ಹಿರಿಯ ಪತ್ರಕರ್ತ ಶ್ರೀ ವೈ.ಜಿ. ಗಿರಿಶಾಸ್ತ್ರಿ ಅವರು ಸೇರ್ಪಡೆಯಾಗಿದ್ದಾರೆ. ಅವರ ಮಾರ್ಗದರ್ಶನದಲ್ಲಿ ಸಂಚಿಕೆಯ ಗುಣಮಟ್ಟ ಸುಧಾರಿಸಲಿ ಎಂದು ಹಾರೈಸೋಣ. ಮುಂದಿನ ಸಂಚಿಕೆಗಳು ಸಕಾಲದಲ್ಲಿ ಬರಲಿವೆ ಎಂಬ ಆಶಯದೊಂದಿಗೆ,

■ ಕೆ.ಎಸ್. ಮಧುಸೂದನ



ಸಂಪಾದಕ ಸಮಿತಿಯ ನೂತನ ಸದಸ್ಯರಾದ **ಶ್ರೀ ವೈ.ಜಿ. ಗಿರಿಶಾಸ್ತ್ರಿ** ಅವರಿಗೆ ಅಭಿನಂದನೆಗಳು

## ಮೈ.ಮಂ.ದ್ರಾ.ಬೃ. ಸಂಘದ ಕಾರ್ಯಕಾರಿ ಸಮಿತಿ

ಅಧ್ಯಕ್ಷರು : ಎಸ್. ಸೋಮಸುಂದರ
ಉಪಾಧ್ಯಕ್ಷರು : ಕೆ.ಬಿ. ಮುರಳಿ
ಕೆ. ಮಂಜುನಾರಾಯಣ್
ಕಾರ್ಯದರ್ಶಿ : ವಿ.ಎಸ್. ಮಣಿ
ಸಹಕಾರ್ಯದರ್ಶಿ : ವಿ. ಅರುಣ
ಖಜಾಂಚಿ : ಎಸ್. ಸತ್ಯನಾರಾಯಣ
ಲೆಕ್ಕಪರಿಶೋಧಕರು : ಎಚ್.ಕೆ. ಶಶಿಧರ್

ಸದಸ್ಯರು : ಆರ್.ಎ. ಈಶ್ವರನ್, ಟಿ.ಎಸ್. ಮಣಿ, ಎಸ್. ಶ್ರೀನಿವಾಸನ್, ಆರ್. ಗೋಪಾಲಕೃಷ್ಣ, ಎಸ್. ಸಿ. ಶ್ರೀನಿವಾಸ, ಬಿ. ಶ್ರೀಧರ್, ಕೆ. ಜಿ. ವೆಂಕಟೇಶ್, ಸರಸ್ವತಿ ನಟರಾಜನ್, ಎ.ವಿ. ಮಂಜುನಾಥ, ಟಿ.ಪಿ. ಸೂರ್ಯನಾರಾಯಣ, ಗಣೇಶ ಶ್ರೀಧರ್, ಟಿ.ಎಸ್. ನಾಗೇಶ್, ಟಿ.ಎಸ್. ರಮೇಶ್, ಕೆ.ಸಿ. ನಟರಾಜನ್

ಸಲಹೆ : ಕೆ.ಎಸ್. ಮಧುಸೂದನ

## ಕೃತಜ್ಞತೆಗಳು

ಇದುವರೆಗೂ ಸಂಪಾದಕ ಸಮಿತಿಯ ಸದಸ್ಯರಾಗಿದ್ದು ಕಾರ್ಯಭಾರದಿಂದ ಬಿಡುಗಡೆ ಹೊಂದಿರುವ **ಶ್ರೀ ಬಿ.ಎಸ್. ಸೂರ್ಯನಾರಾಯಣ** ಹಾಗೂ **ಶ್ರೀ ಎನ್. ಚಂದ್ರಮೌಳಿ** ಅವರಿಗೆ ಕೃತಜ್ಞತೆಗಳು. ಅವರ ಸೇವೆ ಸಂಘಕ್ಕೆ ಮುಂದುವರೆಯಲಿದೆ ಎಂಬ ಭರವಸೆ ನಮಗಿದೆ.



## ಪ್ರಶಂಸೆ

ಅಖಿಲ ಕರ್ನಾಟಕ ಬ್ರಾಹ್ಮಣ ಸಭಾ ಅಧ್ಯಕ್ಷರಾದ **ಡಾ. ಬಿ.ಎನ್. ವಿ. ಸುಬ್ರಮಣ್ಯ**ರವರು ನಮ್ಮ ಸಂಘದ ತ್ರೈಮಾಸಿಕ ಪತ್ರಿಕೆ **'ಬೃಹಚ್ಚರಣ'** ಪತ್ರಿಕೆ ನೋಡಿ, ನಮ್ಮ ಸಂಘದ ಅಧ್ಯಕ್ಷ **ಶ್ರೀ ಸೋಮಸುಂದರ**ರವರನ್ನು ಪ್ರಶಂಸಿಸಿ ಉಚಿತವಾಗಿ ಸಮುದಾಯದವರಿಗೆ ತಲುಪಿಸುತ್ತಿರುವುದಕ್ಕೆ ಅಭಿನಂದಿಸಿದರು.

## ಶುಭ ಹಾರೈಕೆ



ಆರ್.ಎಸ್. ರಮೇಶ್ 'ಬೃಹಚ್ಚರಣ' ಸಂಘದ ಪೋಷಕರು.

ಹಿತೈಷಿಗಳಾದ ಶ್ರೀಯುತರು ಶ್ರೀಮತಿ ಶಾಂತಾ ಹಾಗೂ ರಾಜಾಪುರ ಸುಬ್ಬರಾಮಯ್ಯನವರ ಸುಪುತ್ರರು.

ಭಾರತೀಯ ಸ್ಟೇಟ್ ಬ್ಯಾಂಕ್‌ನ ಅಮೇರಿಕಾ ಶಾಖೆಯಲ್ಲಿ ನಾಲ್ಕು ವರ್ಷಗಳ ಉತ್ತಮಸೇವೆ ಸಲ್ಲಿಸಿ, ಈಗ ಡೆಪ್ಯುಟಿ ಜನರಲ್ ಮ್ಯಾನೇಜರ್ ಆಗಿ ಬಡ್ತಿ ಪಡೆದು ಭಾರತಕ್ಕೆ ಹಿಂತಿರುಗಿರುವ ಈ ಸಂದರ್ಭದಲ್ಲಿ "ಬೃಹಚ್ಚರಣ" ಸಂಘವು ಆತ್ಮೀಯತೆಯಿಂದ ಸ್ವಾಗತಿಸುತ್ತದೆ. ಶ್ರೀಯುತ ರಮೇಶ್‌ರವರು ಇನ್ನೂ ವೃತ್ತಿಯಲ್ಲಿ ಪ್ರವರ್ಧಮಾನಕ್ಕೇರಿ ಸಂಘದ ಅಭಿವೃದ್ಧಿಗೆ ಸಹಕಾರ ನೀಡುತ್ತಾರೆಂಬ ನಂಬಿಕೆ ಇದೆ.

ಶ್ರೀ ರಮೇಶರವರ ಪುತ್ರ ಚಿ॥ ರೋಹಿತ್ ಅಮೇರಿಕಾದಲ್ಲೆ ಕಾರ್ಯಪ್ರವೃತ್ತರಾಗಿದ್ದು, ಪುತ್ರಿ ಕು॥ ರಚಿತ ಬೆಂಗಳೂರಿನಲ್ಲಿ ಪದವಿ ಪಡೆಯುತ್ತಿದ್ದಾರೆ. ಇತ್ತೀಚೆಗೆ ಪತ್ನಿ ಶ್ರೀಮತಿ ರೇಖಾರೊಂದಿಗೆ ಮದುವೆಯ ಬೆಳ್ಳಿಹಬ್ಬ ಆಚರಿಸಿಕೊಂಡು ಐವತ್ತು ವಸಂತಗಳನ್ನು ಕಂಡಿರುವ ಶ್ರೀ ರಮೇಶ್ ಕುಟುಂಬದವರಿಗೆ ಸಂಘವು, ಆರೋಗ್ಯ ನೆಮ್ಮದಿ ಸದಾ ಇರಲೆಂದು ಹಾರೈಸುತ್ತದೆ.

## 'ಬೆಳ್ಳಿಹಬ್ಬ'ದ ಹಾರೈಕೆ

ಬೃಹಚ್ಚರಣ ಸಂಘದ ಸ್ಥಾಪಕ, ಪೋಷಕ ಶ್ರೀ ಸೂರಪ್ಪನವರ ಪುತ್ರ
ಹಾಗೂ ನಮ್ಮ ಸಂಘದ ಪೋಷಕ
**ಶ್ರೀ ಎಸ್. ಚಂದ್ರಶೇಖರ್** ಮತ್ತು **ಶ್ರೀಮತಿ ರಮಾದೇವಿ**ಯವರ
ಮದುವೆಯ **'ಬೆಳ್ಳಿಹಬ್ಬ'** ದಿನಾಂಕ : 18-11-12ರಂದು
ಬಸವನಗುಡಿಯ ಶ್ರೀ ರಾಘವೇಂದ್ರ ಸ್ವಾಮಿ ಮಠದ
'ಅನ್ನಪೂರ್ಣೇಶ್ವರಿ ಮಂಟಪ'ದಲ್ಲಿ ನೆರವೇರಿದ್ದು, ಸಂಘದ
ಕಾರ್ಯಕಾರಿ ಸಮಿತಿ ಹಾಗೂ ಸದಸ್ಯರು
**ಶ್ರೀಮತಿ** ಮತ್ತು **ಶ್ರೀ ಚಂದ್ರಶೇಖರ್**‌ರವರಿಗೆ ಶುಭ ಹಾರೈಸಿರುತ್ತಾರೆ.

## ರಾಮಾಯಣ-ಮಹಾಭಾರತದ ರಸಪ್ರಶ್ನೆ ವಿಜೇತರು

ರಾಮಾಯಣ-ಮಹಾಭಾರತದ ಬಗ್ಗೆ ಬೃಹಚ್ಚರಣ ಸಂಘವು 30-12-2012 ರಂದು ನಡೆಸಿದ **ರಸಪ್ರಶ್ನೆ** ಸ್ಪರ್ಧೆಯಲ್ಲಿ ಕುಮಾರಿ **ಪೂಜಾ ಉಮಾಶಂಕರ್** ಹಾಗೂ ಕುಮಾರಿ **ಅಶ್ವಿನಿ ವೆಂಕಟೇಶ್** ವಿಜೇತರಾಗಿದ್ದಾರೆ.




ಚೂಡಸಂದ್ರದ ಸಂತೃಪ್ತ ತುಂಬು ಕುಟುಂಬ

ಚಿತ್ರಕೃಪೆ: ಶ್ರೀ ಎಸ್. ಶಿವರಾಂ
ಚಲನಚಿತ್ರ ಕ್ಷೇತ್ರದ ದಿಗ್ಗಜರು

## ವೀಣಾವಾದನ




### ಸರಸ್ವತಿ ನಟರಾಜನ್

ದಿನಾಂಕ : 30–12–2012ರಂದು ನಡೆದ **'ಬೃಹಚ್ಚರಣ ಸಮಾವೇಶ'**ದ ಸಮಾರಂಭದಲ್ಲಿ ಸಂಘದ ಸದಸ್ಯೆ **ಶ್ರೀಮತಿ ಸರಸ್ವತಿ ನಟರಾಜನ್**‌ರವರ ವೀಣಾವಾದನ ಸಂಗೀತ ಕಛೇರಿಯು, ಮಲ್ಲೇಶ್ವರದ ವಿದ್ವಾನ್ ನಾಗರಾಜ್‌ರವರ ಮೃದಂಗದ ಪಕ್ಕವಾದ್ಯದೊಂದಿಗೆ ನೆರವೇರಿ, ಸಹೃದಯರ ಮನ ಮೆಚ್ಚಿಸಿತು. ಸಂಘದ ಕಾರ್ಯಕಾರಿ ಸಮಿತಿಯು ಶ್ರೀಮತಿ ಸರಸ್ವತಿಯವರಿಗೆ ಅಭಿನಂದನೆ ಸಲ್ಲಿಸಿತು.

### "ಬೃಹಚ್ಚರಣ" ದಿನಚರಿ ಕ್ಯಾಲೆಂಡರ್

ಹಿಂದಿನ ವರ್ಷಗಳಂತೆ ಈ ಬಾರಿಯೂ 'ಬೃಹಚ್ಚರಣ' ಸಂಘವು ಯುಗಾದಿ ಹಬ್ಬದ ವೇಳೆಗೆ ದಿನಚರಿ ಕ್ಯಾಲೆಂಡರ್ ತರಲು ಉದ್ದೇಶಿಸಿದ್ದು, ಪ್ರಾಯೋಜಕರಾಗ ಬಯಸುವವರು ಸಂಘದ ಅಧ್ಯಕ್ಷರು ಅಥವಾ ಕಾರ್ಯದರ್ಶಿಗಳನ್ನು ಫೆಬವರಿ 10–2–2013ರ ಒಳಗೆ ಸಂಪರ್ಕಿಸಬಹುದಾಗಿದೆ.



## ವಿವಾಹ

ಸಂಘದ ಸದಸ್ಯ ಶ್ರೀ ಅಶೋಕ್‌ಕುಮಾರ್ ಹಾಗೂ ಶ್ರೀಮತಿ ಪುಷ್ಪರವರ ಪುತ್ರಿ **ಚಿ॥ ಮೇಘ** ಹಾಗೂ **ಚಿ॥ ರಂಜನ್**‌ರ ವಿವಾಹ ಮಹೋತ್ಸವ 23–11–12ರಂದು ವಿಜಯನಗರದ ಬಂಟ್ ಸಂಘದಲ್ಲಿ ಜರುಗಿತು. ನೂತನ ವಧೂವರರಿಗೆ **'ಬೃಹಚ್ಚರಣ'** ಸಂಘ ಶುಭ ಹಾರೈಸುತ್ತದೆ.

★ ★ ★

ಸಂಘದ ಸದಸ್ಯೆ ಹಾಗೂ ಹಿತೈಷಿ ಶ್ರೀಮತಿ ಮೀನಾಕ್ಷಿ ನಾಗರಾಜ್‌ರವರು ತಮ್ಮ ಪುತ್ರ, ಸಂಘದ ಸದಸ್ಯರಾದ **ಚಿ॥ ಎನ್. ನವೀನ್**‌ರವರನ್ನು **ಚಿ॥ಸೌ॥ ಎ. ಇಂದುಮತಿ**ಯೊಂದಿಗೆ 18–11–2012ರಂದು ವಿವಾಹ ನೆರವೇರಿಸಿರುತ್ತಾರೆ. **'ಬೃಹಚ್ಚರಣ'** ಸಂಘವು ನೂತನ ವಧೂವರರಿಗೆ ಶುಭ ಹಾರೈಸುತ್ತದೆ.

★ ★ ★

ಸಂಘದ ಪೋಷಕರೂ, ಖಜಾಂಚಿಗಳೂ ಆದ ಕಿತ್ತಗಾನಹಳ್ಳಿ ಶ್ರೀ ಸತ್ಯನಾರಾಯಣ ಮತ್ತು ಶ್ರೀಮತಿ ಪದ್ಮಾವತಿಯವರು ತಮ್ಮ ಪುತ್ರಿ **ಚಿ॥ ಸೌ॥ ಮಾನಸ**ಳೊಂದಿಗೆ **ಚಿ॥ ರಾ॥ ಅರವಿಂದ**ರವರ ವಿವಾಹ ಮಹೋತ್ಸವವನ್ನು ಬಸವನಗುಡಿಯ 'ಸತ್ಯಪ್ರಮೋದ' ಕಲ್ಯಾಣ ಮಂಟಪದಲ್ಲಿ ನೆರವೇರಿಸಿದರು. ನೂತನ ವಧೂವರರಿಗೆ **'ಬೃಹಚ್ಚರಣ'** ಸಂಘವು ಶುಭ ಹಾರೈಸುತ್ತದೆ.

★ ★ ★

ಸಂಘದ ಸದಸ್ಯ ಶ್ರೀ ವಿನಾಯಕ ಪ್ರಸಾದ್ ಹಾಗೂ ಶ್ರೀಮತಿ ಮಲ್ಲಿಕಾರವರ ಪುತ್ರ ಸಂಘದ ಹಿರಿಯ ಸದಸ್ಯ ಗುಮ್ಮಳಾಪುರದ ರಾಧಾಕೃಷ್ಣರವರ ಮೊಮ್ಮಗ **ಚಿ॥ರಾ॥ ಜಿ.ವಿ. ಕಾರ್ತೀಕ್** ಹಾಗೂ **ಚಿ॥ ಸೌ॥ ಅನುರಾಧಾ**ರ ವಿವಾಹವು 21–10–2012ರಂದು ನೆರವೇರಿತು. ಬೃಹಚ್ಚರಣ ಸಂಘವು ನೂತನ ದಂಪತಿಗಳಿಗೆ ಶುಭ ಹಾರೈಸುತ್ತದೆ.

## ಶಾಶ್ವತ ಅನ್ನಸಂತರ್ಪಣ ನಿಧಿಯ ದಾನಿಗಳು

| | | |
|---|---|---|
| 1. | ಸ್ವರ್ಣ ಪ್ರಸಾದ್ | 2,500/– |
| 2. | ಬಿ.ವಿ. ವೆಂಕಟಕೃಷ್ಣ | 4,000/– |
| 3. | ಎ.ಪಿ.ರಾಮಕೃಷ್ಣ | 2,500/– |
| 4. | ಎನ್. ಚಂದ್ರಶೇಖರಯ್ಯ | 4,000/– |
| 5. | ಅರುಣ್ ಜಿ. ಕಾರ್ತಿಕ್ | 1,500/– |
| 6. | ವೈ.ಕೆ. ಶ್ರೀನಿವಾಸ | 1,500/– |
| 7. | ಟಿ.ಜಿ. ವೆಂಕಟೇಶ್ | 1,500/– |
| 8. | ಕೆ.ಆರ್. ಗಿಣಿ | 4,000/– |
| 9. | ಎಸ್.ಆರ್. ಸೂರಪ್ಪ | 4,000/– |
| 10. | ಕೆ.ಸಿ. ನಟರಾಜನ್ | 2,500/– |
| 11. | ಬಿ.ಎಸ್. ಸೂರ್ಯನಾರಾಯಣ | 4,000/– |
| 12. | ಬಿ.ಇ. ಗೋವಿಂದ | 4,000/– |
| 13. | ಬಿ.ಇ. ಸೀತಾಲಕ್ಷ್ಮಿ | 1,500/– |
| 14. | ಬಿ.ಇ. ರಮೇಶ್ | 1,500/– |
| 15. | ಬಿ.ಇ. ಸುರೇಶ್ | 1,500/– |
| 16. | ಲಕ್ಷ್ಮಿ ನಟರಾಜನ್ | 2,500/– |
| 17. | ಬಿ.ಎಸ್. ನಾಗರತ್ನ | 1,500/– |
| 18. | ಭಾರತಿ ಶ್ರೀಕಂಠೇಶ್ವರನ್ | 4,000/– |
| 19. | ಎಂ. ಆರ್. ಜಯರಾಮನ್ | 4,000/– |
| 20. | ಎನ್. ನಾಗರಾಜ್ | 1,500/– |
| 21. | ಆರ್.ಎಸ್. ರಮೇಶ್ | 4,000/– |
| 22. | ಬಿ.ಇ. ಯೋಗೇಶ್ | 4,000/– |
| 23. | ವಿಮಲ | 1,500/– |
| 24. | ಎ.ಎನ್. ಶಿವರಾಂ | 4,000/– |
| 25. | ಜಿ.ಎಸ್. ಗೌರಮ್ಮ | 1,500/– |
| 26. | ಕೆ. ಶಾಂತ | 4,000/– |

### ನಿರಂತರ ಅನ್ನ ಸಂತರ್ಪಣಾ ನಿಧಿ ಪುದುವಟ್ಟಿಗೆ ಪ್ರಥಮ ದಾನಿ ಶ್ರೀ ಎಚ್.ಪಿ. ರಾಮಕೃಷ್ಣ

'ಬೃಹಚ್ಚರಣ' ಸಂಘವು ಪ್ರಾರಂಭಿಸಿರುವ 'ನಿರಂತರ ಅನ್ನಸಂತರ್ಪಣಾ ನಿಧಿ'ಯ ಪುದುವಟ್ಟಿಗೆ ಪ್ರಪ್ರಥಮವಾಗಿ ನಮ್ಮ ಸಂಘದ ಹಿರಿಯ ಸದಸ್ಯ **ಶ್ರೀ ಹೆಚ್.ಪಿ. ರಾಮಕೃಷ್ಣರವರು** ಒಂದು ದಂಪತಿಗಳಿಗೆ **ರೂ. 2,500/–** ನೀಡಿದ್ದು, ತಮ್ಮ ಕುಟುಂಬದ ಎಲ್ಲಾ ಸದಸ್ಯರೂ ಈ ಅವಕಾಶ ಉಪಯೋಗಿಸಿಕೊಳ್ಳುತ್ತೇವೆ ಎಂದಿದ್ದಾರೆ. ಸಂಘವು **ಶ್ರೀ ರಾಮಕೃಷ್ಣ** ಅವರನ್ನು ಅಭಿನಂದಿಸುತ್ತದೆ.

## ಯುವ ಕಲಾವಿದರಿಗೆ ಅವಕಾಶ

ಬೃಹಚ್ಚರಣ ಸಂಘವು, ತನ್ನ ಸದಸ್ಯರ ಕುಟುಂಬದ ಯುವ ಕಲಾವಿದರಿಗೆ ಪ್ರೋತ್ಸಾಹ ನೀಡಲು ಸಾರ್ವಜನಿಕವಾಗಿ ವೇದಿಕೆ ಕಲ್ಪಿಸಲು ತೀರ್ಮಾನಿಸಿದಂತೆ, 30–12–2012ರಂದು **'ಬೃಹಚ್ಚರಣ ಸಮಾವೇಶ'** ಕಾರ್ಯಕ್ರಮದಲ್ಲಿ ಚಿ. ಶ್ರೇಯಸ್ ನಂದನ್‌ರವರು ಕೀ ಬೋರ್ಡ್‌ನಲ್ಲಿ ಹಾಗೂ ಚಿ. ವಾಣಿಶ್ರೀ ಹಾಡುಗಾರಿಕೆಯಲ್ಲಿ ಮತ್ತು ಚಿ. ಅಭಯ್ ದೇವರ ಶ್ಲೋಕ ಹೇಳಿ ನೆರೆದ ಸಜ್ಜನರಿಂದ ಮೆಚ್ಚುಗೆ ಪಡೆದರು.

ಇಚ್ಚೆಯುಳ್ಳ ಕಲಾವಿದರು ಈ ಬಗ್ಗೆ ಕಾರ್ಯಕಾರಿ ಸಮಿತಿ ಸದಸ್ಯರಲ್ಲಿ ತಿಳಿಸಿದಲ್ಲಿ ಪ್ರತಿಯೊಬ್ಬರಿಗೂ ಮುಂದಿನ ದಿನಗಳಲ್ಲಿ ಅವಕಾಶ ಕಲ್ಪಿಸುವ ಏರ್ಪಾಡು ಮಾಡಲಾಗುವುದು.

## ಭಾಗವಹಿಕೆ

ಬೆಂಗಳೂರು ಮಹಾನಗರ ಬ್ರಾಹ್ಮಣ ಸಭಾದ ಸಭಾಪತಿ ಶ್ರೀ ಬಿ.ಎಸ್. ರವಿಶಂಕರ್‌ವರು ದಿನಾಂಕ: 12–9–2012ರಂದು ಬ್ರಾಹ್ಮಣ ಮಹಾಸಭಾದ ಅಧ್ಯಕ್ಷ ಡಾ. ಬಿ.ಎಸ್.ವಿ. ಸುಬ್ರಹ್ಮಣ್ಯರವರ ಅಧ್ಯಕ್ಷತೆಯಲ್ಲಿ ಬ್ರಾಹ್ಮಣ ಮಹಾಸಭಾದ ಕಾರ್ಯ ಚಟುವಟಿಕೆಗಳನ್ನು ಚರ್ಚಿಸಲು ಕರೆದಿದ್ದ ಸಂಘ ಸಂಸ್ಥೆಗಳ ಸಭೆಯಲ್ಲಿ ನಮ್ಮ ಸಂಘದ ಪ್ರತಿನಿಧಿಗಳಾಗಿ ಅಧ್ಯಕ್ಷ ಶ್ರೀ ಸೋಮಸುಂದರರೊಂದಿಗೆ ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀ ಶಶಿಧರ್, ಶ್ರೀ ಶ್ರೀನಿವಾಸ್, ಶ್ರೀ ಕೆ.ಸಿ. ನಟರಾಜ್ ಭಾಗವಹಿಸಿ, ನಮ್ಮ ಸಂಘದ ಕಾರ್ಯ ಚಟುವಟಿಕೆಗಳನ್ನು ತಿಳಿಸಿ, ಕರ್ನಾಟಕ ಹಾಗೂ ಬ್ರಾಹ್ಮಣ ಸಂಘವು ತೆಗೆದುಕೊಳ್ಳುವ ಕಾರ್ಯಕ್ರಮ ಗಳಿಗೆ ಪೂರ್ಣ ಸಹಕಾರ ನೀಡುವ ಭರವಸೆ ಕೊಡಲಾಯಿತು. ಹಾಗೆಯೇ ಬ್ರಾಹ್ಮಣ ಸಭಾದಿಂದ 'ಬೃಹಚ್ಚರಣ' ಸಂಘದ ಕಾರ್ಯ ಚಟುವಟಿಕೆಗಳಿಗೆ ಸಹಕಾರ ಕೋರಲಾಯಿತು.

## ಬೃಹಚ್ಚರಣ ಸಂಘದಿಂದ 75 ವಸಂತಗಳನ್ನು ಕಂಡ ಹಿರಿಯ ಚೇತನಗಳಿಗೆ ಗೌರವ ಸಮರ್ಪಣೆ (30–12–2012)

✦ಶ್ರೀಮತಿ ಅನಸೂಯಮ್ಮ ✦ಶ್ರೀಮತಿ ಕೆ. ಶಾಂತ
✦ಶ್ರೀಮತಿ ಗಾಯಿತ್ರಿ ರಾಜಾಪುರ ✦ಶ್ರೀಮತಿ ಪ್ರೊ. ಬಿ.ಎಸ್. ನಾಗರತ್ನಮ್ಮ
✦ಶ್ರೀಮತಿ ಆರ್.ಎ. ಸ್ವರ್ಣಾಂಬ ✦ಶ್ರೀ ಪದ್ಮನಾಭನ್ ಆರ್.ಎಸ್.
✦ಶ್ರೀ ಬಿ.ಎಸ್. ಜಯರಾಂ ✦ಶ್ರೀ ಬಿ.ಎಸ್. ಸೂರ್ಯನಾರಾಯಣ
✦ಶ್ರೀ ಎಸ್.ಆರ್. ವಿಶ್ವನಾಥ್ ✦ಶ್ರೀ ಎಸ್. ಶಿವರಾಂ,
✦ಶ್ರೀ ಬಿ.ಜಿ. ರಾಮಣ್ಣ ✦ಶ್ರೀ ಎನ್. ಚಂದ್ರಶೇಖರಯ್ಯ,
✦ಶ್ರೀ ಜಿ. ವೆಂಕಟೇಶ್ ✦ಶ್ರೀ ಆರ್. ಚಂದ್ರಮೌಳಿ

## ಬೃಹಚ್ಚರಣ ಸಂಘದಿಂದ ಪ್ರತಿಭಾ ಪುರಸ್ಕೃತರು

| | |
|---|---|
| ಚಿ॥ ಶ್ರೇಯಸ್ ನಂದನ್ | ಎಸ್.ಎಸ್.ಎಲ್.ಸಿ. |
| ಚಿ॥ ಸುಮನ್ ಜಿ. ಕೃಷ್ಣ | –"– |
| ಚಿ॥ ಎಲ್. ದ್ಯುತಿ | –"– |
| ಚಿ॥ ಮಯೂರಿ | –"– |
| ಚಿ॥ ಧನುಷ ಅಶೋಕ | –"– |
| ಚಿ॥ ಪ್ರತೀಕ್ಷಾ ಎಸ್. | –"– |
| ಚಿ॥ ರಮ್ಯಾ ವಿಜಯಕುಮಾರ್ | ಪಿ.ಯು.ಸಿ. |
| ಚಿ॥ ವಿನಯಕುಮಾರ್ | –"– |
| ಚಿ॥ ಪ್ರಾಂಜಲ್ ಶರ್ಮ ಆರ್. | –"– |
| ಚಿ॥ ಮೈತ್ರಿ | –"– |
| ಚಿ॥ ಸಹನಾ ಈಶ್ವರನ್ | –"– |
| ಚಿ॥ ಶಾಂಸುಂದರ್ ಬಿ.ವಿ. | –"– |
| ಚಿ॥ ನಿಖಿಲಾ ಜಿ.ವಿ. | –"– |
| ಚಿ॥ ಪ್ರದ್ಯುಮ್ನ | –"– |
| ಚಿ॥ ಸುಮುಖ | –"– |

## ಗಮನಿಕೆ

ಸಂಘದ ಸದಸ್ಯರಾಗಿ

ಪೋಷಕರು : ರೂ. 5,000/-
ಸದಸ್ಯತ್ವ : ರೂ. 1,000/-

## ಬಿನ್ನಮಂಗಲದ ಕಂಬದ ಶ್ರೀ ಆಂಜನೇಯ

ಶ್ರೀ ವ್ಯಾಸರಾಜರು ವಿಜಯನಗರ ಸಾಮ್ರಾಜ್ಯದಲ್ಲಿ ರಾಜಗುರುಗಳಾಗಿದ್ದರು. ಹಾಗೂ ದಾಸಶ್ರೇಷ್ಠರಾದ ಕನಕದಾಸ ಮತ್ತು ಪುರಂದರ ದಾಸರಿಗೂ ಗುರುಗಳಾಗಿದ್ದರು. ಸುಮಾರು ಐನೂರು ವರ್ಷಗಳ ಹಿಂದೆ, ಶ್ರೀವ್ಯಾಸರಾಜರು ಸುಮಾರು ೭೩೨ ಶ್ರೀ ಆಂಜನೇಯ ವಿಗ್ರಹವನ್ನು ಇಡೀ ಭಾರತದಲ್ಲಿ ಪ್ರತಿಷ್ಠಾಪಿಸಿರುವರೆಂಬ ಉಲ್ಲೇಖವಿದೆ. ಶ್ರೀ ವ್ಯಾಸರಾಜರು ಶ್ರೀ ಶಂಖುಕರ್ಣನ ಅವತಾರಗಳಲ್ಲಿ ಒಬ್ಬರು. ಅವರುಗಳೆಂದರೆ ೧) ಶ್ರೀ ಪ್ರಹ್ಲಾದರು ೨) ಶ್ರೀ ಬಾಲಿಕಾರವರು ೩) ಶ್ರೀ ವ್ಯಾಸರಾಜರು ಹಾಗೂ ೪) ಶ್ರೀ ರಾಘವೇಂದ್ರ ಸ್ವಾಮಿಗಳು.

ಶ್ರೀ ವ್ಯಾಸರಾಜರು ಪ್ರತಿಷ್ಠಾಪಿಸಿರುವ ಶ್ರೀ ಆಂಜನೇಯ ವಿಗ್ರಹದಲ್ಲಿ ಹಲವು ವಿಶೇಷಗಳನ್ನು ನಾವು ಕಾಣಬಹುದು

ಸ್ವಾಮಿಯ ಒಂದು ಹಸ್ತವು ಭಕ್ತರನ್ನು ಹರಸುವಂತೆ ಹಾಗೂ ಗಗನಾಭಿಮುಖ ವಾಗಿರುತ್ತದೆ. ಸ್ವಾಮಿಯ ಮತ್ತೊಂದು ಹಸ್ತದಲ್ಲಿ ಸೌಗಂಧಿಕಾ ಪುಷ್ಪವಿರುತ್ತದೆ. ಸ್ವಾಮಿಯ ಬಾಲವು ತಲೆಯ ಮೇಲ್ಭಾಗದಲ್ಲಿ ಹಾದು ಅಲ್ಲಿ ಒಂದು ವೃತ್ತವಿರುವಂತೆ ಕಾಣುತ್ತದೆ. ಸ್ವಾಮಿಯ ಬಾಲದ ತುದಿಯಲ್ಲಿ ಒಂದು ಚಿಕ್ಕಗಂಟೆಯನ್ನು ಸಹ ಕಾಣಬಹುದು.

ಈ ಮೇಲ್ಕಂಡ ವಿಶೇಷಗಳನ್ನು ಶ್ರೀ ವ್ಯಾಸರಾಜರು ಪ್ರತಿಷ್ಠಾಪಿಸಿರುವ ಎಲ್ಲಾ ಆಂಜನೇಯ ಮೂರ್ತಿಗಳಲ್ಲೂ ಕಾಣಬಹುದು.ಈ ದೇವಾಲಯವು ಧರ್ಮಪುರಿ ಜಿಲ್ಲೆ, ಡೆಂಕಣಿಕೋಟೆ ತಾಲ್ಲೂಕಿನ ಬಿನ್ನಮಂಗಲದಲ್ಲಿದೆ. ಇದು ಹೊಸೂರು ಬಸ್ ನಿಲ್ದಾಣದಿಂದ 12 ಕಿ.ಮೀ. ಮತ್ತು ಆನೇಕಲ್‌ನಿಂದ 8 ಕಿ.ಮೀ. ಗಳಾಗುತ್ತದೆ. ಇದು ಕರ್ನಾಟಕ ಮತ್ತು ತಮಿಳುನಾಡಿನ ಗಡಿಪ್ರದೇಶ ದಲ್ಲಿರುತ್ತದೆ. ಇದು "ಮುತ್ಯಾಲಮಡುವು" ಎಂಬ ಪ್ರೇಕ್ಷಣೀಯ ಸ್ಥಳಕ್ಕೆ ಹತ್ತಿರ ವಾಗಿದೆ. ಶ್ರೀ ಆಂಜನೇಯ ಮೂರ್ತಿಯನ್ನು ಗರುಡಗಂಬದಲ್ಲಿ ಕೆತ್ತಿರುವುದರಿಂದ, ಇದು "ಕಂಬದ ಆಂಜನೇಯ"ನೆಂದು ಪ್ರಸಿದ್ಧಿಯಾಗಿದೆ.



■ ಬಿ.ಪಿ. ಸರಸ್ವತಿ

## ನಮ್ಮನ್ನಗಲಿದ ನಮ್ಮವರು

**ಶ್ರೀಮತಿ ಶಾಂತಮ್ಮ ಶ್ರೀನಿವಾಸ್**, ಸಂಘದ ಸದಸ್ಯ ಶ್ರೀ ವಾಸು, ಮೋಹನ್‌ರವರ ತಾಯಿ

**ಶ್ರೀಮತಿ ಶಾರದಮ್ಮ**, ಶ್ರೀ ವೆಂಕಟಗಿರಿಯಪ್ಪನವರ ಪತ್ನಿ

**ಶ್ರೀಮತಿ ಸೀತಾಲಕ್ಷ್ಮಿ**, ಸಂಘದ ಸದಸ್ಯ ಶ್ರೀ ಪ್ರಶಾಂತ್ ಮತ್ತು ಶ್ರೀ ಬಾಲಸುಬ್ರಮಣ್ಯರವರ ತಾಯಿ

**ಶ್ರೀಮತಿ ಅನಸೂಯ ಆರ್.ಎಸ್. ಐಯರ್**, ಹಜರತ್ ರಾಮಯ್ಯನವರ ಮೊಮ್ಮಗಳು

**ಶ್ರೀ ಎಸ್. ರಂಗನಾಥನ್**, ಸಂಘದ ಕಾರ್ಯಕಾರಿಸಮಿತಿ ಸದಸ್ಯ ಶ್ರೀ ಗೋಪಾಲ್ ಹಾಗೂ ಶ್ರೀ ಗಣೇಶ್‌ರವರ ತಂದೆ

**ಶ್ರೀ ಎಸ್. ರಾಮನಾಥನ್**, ಸಂಘದ ಹಿರಿಯ ಸದಸ್ಯರು, ಚಲನಚಿತ್ರ ರಂಗದ ದಿಗ್ಗಜ ಶ್ರೀ ಎಸ್. ಶಿವರಾಂರವರ ಸೋದರರು


**ಶ್ರೀ ನಾರಾಯ ಸ್ವಾಮಿ**, ಯಶವಂತಪುರ ಕಲಾವಿದರು, ಸಹಕಾರ ಚಳವಳಿಯ ಹಿರಿಕಾರರು, ಸಂಘದ ಹಿಂದಿನ ಲೆಕ್ಕಪರಿಶೋಧಕರು, ಹಿರಿಯ ಚೇತನ ಸನ್ಮಾನಿತರು

**ಶ್ರೀ ಎಂ.ಎಸ್.ಎಸ್. ನಾರಾಯಣ್**, ಕೆನರಾ ಬ್ಯಾಂಕ್ ನಿವೃತ್ತ ಅಧಿಕಾರಿ, ಸಂಘದ ಪೋಷಕ ಶ್ರೀ ಎಸ್.ಎಸ್. ವಾಸನ್‌ರವರ ತಂದೆಯವರು

**ಶ್ರೀ ಗೋವಿಂದ್**, ನಿವೃತ್ತ ಬೆಸ್ಕಂಮ್ ಅಧಿಕಾರಿ, ಶ್ರೀಮತಿ ಉಮಾರವರ ಪತಿ.

**ಟಿ.ಜಿ. ಸತ್ಯನಾರಾಯಣ**, ಸಂಘದ ಸದಸ್ಯ ಶ್ರೀ ಸತ್ಯಪ್ರಸಾದ್ ಹಾಗೂ ಶ್ರೀ ಸುಬ್ರಮಣ್ಯರವರ ತಂದೆ

**ಶ್ರೀ ಗುಂಡಪ್ಪ**, ಸಂಘದ ಸದಸ್ಯ ಶ್ರೀ ಲಕ್ಷ್ಮೀನಾರಾಯಣರವರ ತಂದೆ



## ಪಟ್ಟಾಭಿರಾಮಯ್ಯ

ನಮ್ಮ ಸಮಾಜದ ತಟ್ಟನಹಳ್ಳಿ ಕುಟುಂಬಕ್ಕೆ ಸೇರಿದ ಶ್ರೀಯುತ ಬಿ. ಪಟ್ಟಾಭಿರಾಮಯ್ಯ ಕಾಶ್ಯಪ ಗೋತ್ರದವರು, ತಟ್ಟನಹಳ್ಳಿ ಸೂರ್ಯನಾರಾಯಣ ಮತ್ತು ವೆಂಕಟಸುಬ್ಬಮ್ಮ ಅವರ ಸುಪುತ್ರನಾಗಿ ದಿನಾಂಕ : 23-5-1929ನೇ ತಾ॥ ಶಂಕರ ಜಯಂತಿಯಂದು ಜನಿಸಿದರು. ಬೆಂಗಳೂರಿನಲ್ಲಿ ವಿದ್ಯಾಭ್ಯಾಸವನ್ನು ತಮ್ಮ ಚಿಕ್ಕಪ್ಪ ಮತ್ತು ಸೋದರ ಮಾವಂದಿರ ಬೆಂಬಲದಿಂದ ಮುಂದುವರೆಸಿದರು. ವ್ಯವಸಾಯದೊಂದಿಗೆ ಗ್ರಾಮಾಧಿಕಾರಿ ಹುದ್ದೆಯಲ್ಲಿದ್ದ ಶ್ರೀಯುತರು ಬೆಂಗಳೂರಿನಲ್ಲಿ ನೆಲೆಸಿ "ವಾಣಿಜ್ಯ ಮತ್ತು ಬ್ಯಾಂಕಿಂಗ್" ಕ್ಷೇತ್ರಗಳಲ್ಲಿ ಶ್ರದ್ಧೆ ಮತ್ತು ನಿಷ್ಠೆಯಿಂದ ಸೇವೆ ಮಾಡಿ ಅನೇಕರ ಗೌರವ ಮತ್ತು ನಂಬಿಕೆಗಳಿಗೆ ಪಾತ್ರರಾಗಿದ್ದರು. 1954ರಲ್ಲಿ ಕಿತ್ತಿಗಾನಹಳ್ಳಿಯ ಶ್ರೀ ಸೇಲಂ ಸೂರಪ್ಪನವರ ಪುತ್ರಿ ಶ್ರೀಮತಿ ಪದ್ಮಾವತಮ್ಮನವರನ್ನು ವಿವಾಹವಾದರು. ಶ್ರೀ ಟಿ. ಪಟ್ಟಾಭಿರಾಮಯ್ಯ ಅವರು ಸರಳ ಸ್ವಭಾವದವರಾಗಿ ದೀನದಲಿತರಲ್ಲಿ ಅನುಕಂಪವನ್ನು ಹೊಂದಿದ್ದರು. ಅನೇಕ ದೇವತಾ ಕಾರ್ಯಗಳಿಗೆ ಮತ್ತು ಧಾರ್ಮಿಕ ಆಚರಣೆಗಳಿಗೆ ಸಹೃದಯದಿಂದ ಸಹಾಯ ಮಾಡಿರುತ್ತಾರೆ. ಶ್ರೀ ಪಟ್ಟಾಭಿರಾಮಯ್ಯನವರು ಶ್ರೀರಾಮನ ಪರಮ ಭಕ್ತರು. ಬಸವನಗುಡಿಯ ಶ್ರೀರಾಮಮಂದಿರ ರಸ್ತೆಯಲ್ಲಿರುವ ಶ್ರೀರಾಮ ಮಂದಿರದಲ್ಲಿ ಶ್ರೀರಾಮದೇವರ ಪ್ರತಿಷ್ಠೆಯನ್ನು ಮಾಡಿಸಿದ್ದಾರೆ. ಶ್ರೀಯುತರು ತಮ್ಮ ನಿವಾಸದಲ್ಲಿ ಶೃಂಗೇರಿ ಅಭಿನವ ವಿದ್ಯಾತೀರ್ಥ ಸ್ವಾಮಿಗಳ ಪಾದಪೂಜೆಯನ್ನು ನೆರವೇರಿಸಿ ಕೃತಾರ್ಥ ರಾಗಿದ್ದರು.

ಶ್ರೀ ಪಟ್ಟಾಭಿರಾಮಯ್ಯನವರು "ಬೃಹಚ್ಚರಣ" ಸಂಘವನ್ನು ಪುನರುಜ್ಜೀವನ ಗೊಳಿಸಿ ಕಾರ್ಯಾರಂಭ ಮಾಡಲು ವಿಶೇಷವಾಗಿ ಸಹಾಯ ಮಾಡಿದ್ದಾರೆ. ಬೆಂಗಳೂರಿನಲ್ಲಿರುವ ತಮ್ಮ ಸ್ವಗೃಹದಲ್ಲೇ ಸಂಘದ ಕಚೇರಿ ತೆರೆಯಲು ಅನುವು ಮಾಡಿಕೊಟ್ಟು ಕಾರ್ಯಕಾರಿ ಸಮಿತಿಯ ಹಲವಾರು ಸಭೆಗಳು ತಮ್ಮ ಮನೆಯಲ್ಲೇ ನಡೆಯುವಂತೆ ಮಾಡಿ ಉಪಹಾರ ಭೋಜನಗಳನ್ನು ಅತಿಥಿಗಳಿಗೆ ಏರ್ಪಡಿಸಿದ್ದರು. ಅವರ ಬೆಂಬಲವನ್ನು ಸಂಘವು ಎಂದೂ ಮರೆಯುವಂತಿಲ್ಲ. ಅವರಿಗೆ ಇಬ್ಬರು ಸುಪುತ್ರರು T.P. Jagannatha and T.P. Suryanarayana ಹಾಗೂ ಕುಟುಂಬದ ಸದಸ್ಯರಿಗೆ ಭಗವಂತ ಶಾಂತಿ, ನೆಮ್ಮದಿ ಹಾಗೂ ಆರೋಗ್ಯ ನೀಡಲೆಂದು "ಬೃಹಚ್ಚರಣ" ಸಂಘ ಕೋರುತ್ತದೆ.

## ಷಷ್ಠಿಪೂರ್ತಿ ಶಾಂತಿ ಶುಭಾಶಯ

ಅರವತ್ತು ವಸಂತಗಳನ್ನು ಪೂರೈಸಿ ತುಂಬು ಜೀವನ ನಡೆಸುತ್ತಿರುವ
ನಮ್ಮ ಶ್ರೀ ಬಿ.ಜಿ. ಅನಂತ ಪದ್ಮನಾಭ,
ಜಿ.ಆರ್. ವಿನಾಯಕ ಪ್ರಸಾದ್, ಬಿ.ಪಿ. ದಿಲೀಪ್, ಬಿ.ಎನ್.
ಸೂರ್ಯಪ್ರಕಾಶ್, ಎನ್. ಪ್ರಭಾಕರ ಅವರಿಗೆ
'ಬೃಹಚ್ಚರಣ' ಸಂಘವು ಆರೋಗ್ಯ ಆಯಸ್ಸು, ನೆಮ್ಮದಿ ಸದಾ
ಇರಲೆಂದು ಶುಭ ಹಾರೈಸುತ್ತದೆ.

## 'ಪದಬಂಧ'


**ಐದೂ ಸಂಚಿಕೆಗಳಲ್ಲಿ ಪ್ರಕಟವಾದ 'ಪದಬಂಧ'ಕ್ಕೆ ಯಾವುದೇ ರೀತಿಯ ಉತ್ತರ, ಪ್ರತಿಕ್ರಿಯೆ ಬಾರದೇಯಿರುವುದರಿಂದ 'ಪದಬಂಧ'ವನ್ನು ನಿಲ್ಲಿಸಲಾಗಿದೆ.**

# ಬೃಹಚ್ಚರಣ ಸಂಘದಿಂದ ಪ್ರತಿಭಾ ಪುರಸ್ಕೃತರು

















# ಬೃಹಚ್ಚರಣ ಸಮಾವೇಶ 30-12-2012



ಕುಮಾರಿ ವಾಣಿಶ್ರೀಯಿಂದ ಪ್ರಾರ್ಥನೆ



ಕಾರ್ಯದರ್ಶಿ ಶ್ರೀ ವಿ.ಎಸ್. ಮಣಿಯವರಿಂದ ಪ್ರಾಸ್ತಾವಿಕ ನುಡಿ


ಮಹಿಳಾ ಚೇತನಗಳಾದ ಪ್ರೊ. ನಾಗರತ್ನ, ಶ್ರೀಮತಿ ಶಾರದಾಂಬ, ಶ್ರೀಮತಿ ಕೆ. ಶಾಂತ


ಹಿರಿಯ ಚೇತನ ಶ್ರೀ ಆರ್.ಎಸ್. ಪದ್ಮನಾಭ್


ಹಿರಿಯ ಚೇತನ ಪ್ರೊ. ಬಿ.ಎಸ್. ಸೂರ್ಯನಾರಾಯಣ


ಹಿರಿಯ ಚೇತನ ಶ್ರೀ ಚಂದ್ರಶೇಖರ್





# ಬೃಹಚ್ಚರಣ ಸಮಾವೇಶ 30-12-2012



ಮಹಾಭಾರತದ ರಸಪ್ರಶ್ನೆ ಕಾರ್ಯಕ್ರಮ ಶ್ರೀ ಸತ್ಯಮೂರ್ತಿಯವರಿಂದ



ಮಹಾಭಾರತದ ರಸಪ್ರಶ್ನೆಯ ವಿಜೇತರು



ನಿರಂತರ ಅನ್ನಸಂತರ್ಪಣ ನಿಧಿಯನ್ನು ಸ್ವೀಕರಿಸುತ್ತಿರುವ ಕಾರ್ಯಕಾರಿ ಸಮಿತಿಯವರು




ಯುವಪ್ರತಿಭೆ ಚಿ॥ ಗೌತಮ್



ಸಭೆಯ ಒಂದು ನೋಟ



ಸಭೆಯ ಇನ್ನೊಂದು ನೋಟ

## ಬೃಹಚ್ಚರಣ ಸಂಘಕ್ಕೆ ಹೊಸ ಸದಸ್ಯರು

ಶ್ರೀ ಕೆ. ಎಲ್. ಪ್ರದೀಪ್‌ಕುಮಾರ್
ಶ್ರೀ ಜಿ. ಉಮೇಶ್ ಕುಮಾರ್
ಶ್ರೀ ಎ.ವಿ. ಜಯರಾಮ್
ಡಾ. ಜಿ.ಎಸ್. ನಂದಕಿಶೋರ್
ಶ್ರೀ ಸಂದೀಪ್. ಜಿ. ಭಾರತಿ

## ಸದಸ್ಯತ್ವದಿಂದ ಪೋಷಕರು

ಶ್ರೀ ಎನ್.ವಿ. ಗೋಪಾಲಯ್ಯ
ಶ್ರೀ ತ್ಯಾಗರಾಜ್ ಎಸ್.

Book-Post

To, ______________________________

______________________________

______________________________

ಜಾಹೀರಾತು ನೀಡಿ ಸಹಕರಿಸಬೇಕಾಗಿ ಪ್ರಾರ್ಥನೆ

Published by Sri S. Somasundara, President, 'BRIHACHARANA SANGHA' No. 8, 3rd Cross, Annaiyyappa Block, Kumarapark West, Bengaluru-560 020.
Printed at **Ila Mudrana,** No. 36, 40Ft. Road, Raghavanagar, NTY Layout, Bengaluru-560 026.